ಗ್ರಾಮೀಣ ಪ್ರದೇಶಗಳಿಗೆ ವಿದ್ಯುತ್ ಸರಬರಾಜು ಮಾಡುವ ಬಗ್ಗೆ.

2752 - ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶದಲ್ಲಿ ಸಣ್ಣ ಹಳ್ಳಿಗಳಿಗೆ ವಿದ್ಯುದ್ದೀಕರಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಮಲೆನಾಡು ಪ್ರದೇಶದಲ್ಲಿ ಹಳ್ಳಿಯಿಂದ ಹಳ್ಳಿಗೆ ವಿದ್ಯುದ್ದೀಕರಣ ಮಾಡಲು ಸೀಮಿತವಾದ ಹಣ ಸಾಲದೆ ಇರುವ ಬಗ್ಗೆ ಬೇರೆ ಪರ್ಯಾಯ ಯೋಜನೆಯನ್ನು ಮಾಡಲಾಗಿದೆಯೇ?

ಇ) ಹಳ್ಳಿಗಾಡಿನಲ್ಲಿ ಮಳೆಯಿಂದ ಹಾಳಾದ ವಿದ್ಯುದ್ದೀಕರಣದ ವ್ಯವಸ್ಥೆ ಸರಿ ಮಾಡುವ ಬಗ್ಗೆ ಗಮನಹರಿಸಲಾಗಿದೆಯೇ? ಹಾಗೂ ಇದನ್ನು ಎಂದು ಸರಿಪಡಿಸಲಾಗುವುದು?

ಈ) ಭಾಗ್ಯಜ್ಯೋತಿ ಯೋಜನೆಯಲ್ಲಿ ಒಂದು ಗ್ರಾಮಕ್ಕೆ 15 ಫಲಾನುಭವಿಗಳಿಗೆ ಸವಲತ್ತನ್ನು ನೀಡುವ ಆದೇಶವಿದ್ದು , ಇದನ್ನು ಸಡಿಲಗೊಳಿಸಿ ಫಲಾನುಭವಿಗಳು ದೊರೆಯುವ ಗ್ರಾಮಗಳಲ್ಲಿ ನಿಗಧಿತ ಸಂಖ್ಯೆಯನ್ನು ಸಡಿಲಗೊಳಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ.ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಈ ಸಾಲಿನಲ್ಲಿ (1991-92) 300 ಉಪ ಗ್ರಾಮಗಳ (ಹ್ಯಾಮ್ಲೇಟ್) ವಿದ್ಯುದ್ದೀಕರಣಕ್ಕೆ ಗುರಿ ನಿಗಧಿಪಡಿಸಿದ್ದು, ಈ ಗುರಿಯ ಸಾಧನೆಗಾಗಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ವಿದ್ಯುದ್ದೀಕರಣಕ್ಕಾಗಿ ಬಾಕಿ ಉಳಿದಿರುವ ಉಪಗ್ರಾಮಗಳನ್ನು ಮುಂಬರುವ ವರ್ಷಗಳಲ್ಲಿ ಹಂತ ಹಂತವಾಗಿ ವಿದ್ಯುದ್ದೀಕರಿಸಲು ಉದ್ದೇಶಿಸಿದೆ.

ಆ) ಈ ಹಿಂದೆ ಪ್ರತಿ ಉಪಗ್ರಾಮ : ಹರಿಜನ ಬಸ್ತಿ ತಾಂಡದ ವಿದ್ಯುದ್ದೀಕರಣಕ್ಕೆ ಇದ್ದ ಆರ್ಥಿಕ ಮಿತಿಯನ್ನು 40,000 ರೂಪಾಯಿಯಿಂದ 1,00,000 ರೂಪಾಯಿಗೆ ಈಗ ಹೆಚ್ಚಿಸಲಾಗಿದೆ. ಇದರಿಂದ ಮಲೆನಾಡು ಪ್ರದೇಶದಲ್ಲಿಯೂ ಸಹ ಕೆಲವು ಉಪಗ್ರಾಮಗಳನ್ನು ವಿದ್ಯುದ್ದೀಕರಿಸಲು ಸಾಧ್ಯವಾಗುತ್ತದೆ. ಅಲ್ಲದೆ ಗಿರಿಜನ ಉಪಯೋಜನೆಯಡಿಯಲ್ಲಿ ರಾಜ್ಯದ ಮೈಸೂರು, ಕೊಡಗು ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಗಿರಿಜನ ಕಾಲೋನಿಗಳನ್ನು ವಿದ್ಯುದ್ದೀಕರಣ ಮಾಡಲಾಗುತ್ತಿದೆ.

ಇ) ಮಳೆಯಿಂದ ಹಾಳಾದ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಆದಷ್ಟು ಜಾಗ್ರತೆಯಾಗಿ ದುರಸ್ತಿಗೊಳಿಸಲು, ಮಂಡಳಿಯು ಸದಾ ಸಮಾರೋಪಾದಿಯಲ್ಲಿ ಕ್ರಮ ತೆಗೆದುಕೊಳ್ಳುತ್ತದೆ.

ಈ) ಈ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದ್ದು ಗ್ರಾಮವೊಂದಕ್ಕೆ ಪ್ರಸ್ತುತವಿರುವ 15 ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸುವ ಆದೇಶವನ್ನು ಸದ್ಯದಲ್ಲಿಯೇ ಹೊರಡಿಸಲಾಗುವುದು.